ಒ.ಎಸ್ ನಂ.129/2025

ಪಿ.ಡಬ್ಲ್ಯು: 1

ದಿನಾಂಕಃ02-03-2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ: ಶ್ರೀ. ಎಸ ಎಮ ಜಿ ವಾದಿಯರ ಪರ ವಕೀಲರಿಂದ.**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲ ವಿಷಯಗಳು ನನಗೆ ತಿಳಿದಷ್ಟು ಮಟ್ಟಿಗೆ ಸತ್ಯ ಹಾಗೂ ಸರಿಯಾಗಿರುತ್ತವೆ. ಮತ್ತು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಕಾರಣ ಸದರಿ ಸಾಕ್ಷಿಯನ್ನು ಪಿ. ಡಬ್ಲ್ಯೂ-01 ಎಂದು ಪರಿಗಣಿಸಲಾಯಿತು.

2 ನೇ ಪ್ರತಿವಾದಿಯ ಕಛೇರಿಯವರು ನೀಡಿದ ಹಿಂಬರಹ ಹಾಜರು ಪಡಿಸಿದ್ದು, ಅದನ್ನು ನಿಪಿ-1 ಎಂದು, ಅಜ್ಜಿ ಕಾಳಮ್ಮರವರ ಮರಣ ಪ್ರಮಾಣ ಪತ್ರ ಹಾಜರು ಪಡಿಸಿದ್ದು, ಅದನ್ನು ನಿಪಿ-2 ಎಂದು, ದೊಡ್ಡಪ್ಪ ರಾಮಣ್ಣರವರ ಮರಣ ಪ್ರಮಾಣ ಪತ್ರ ಹಾಜರು ಪಡಿಸಿದ್ದು, ಅದನ್ನು ನಿಪಿ-3 ಎಂದು, ದೊಡ್ಡವ್ವ ರೇಣವ್ವರವರ ಮರಣ ಪ್ರಮಾಣ ಪತ್ರ ಹಾಜರು ಪಡಿಸಿದ್ದು, ಅದನ್ನು ನಿಪಿ-4 ಎಂದು, ತಂದೆ ಪ್ರಹ್ಲಾದರವರ ಮರಣ ಪ್ರಮಾಣ ಪತ್ರ ಹಾಜರು ಪಡಿಸಿದ್ದು, ಅದನ್ನು ನಿಪಿ-5 ಎಂದು, ತಾಯಿ ಇಂದಿರಾಬಾಯಿರವರ ಮರಣ ಪ್ರಮಾಣ ಪತ್ರ ಹಾಜರು ಪಡಿಸಿದ್ದು, ಅದನ್ನು ನಿಪಿ-6 ಎಂದು, 2 ಆಸ್ತಿ ಫ್ರಾಪರ್ಟಿ ಕಾರ್ಡ ಹಾಜರು ಪಡಿಸಿದ್ದು ಅವುಗಳನ್ನು ನಿಪಿ-7, 8 ಎಂದು, ದಿನ ಪತ್ರಿಕೆಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯ ಪರ ಸರ್ಕಾರಿ ವಕೀಲರಿಂದಃ**

ಅಜ್ಜ ತಿಪ್ಪಣ್ಣರವರು ನಾನು ಹುಟ್ಟುವ ಮುಂಚೆಯೇ ಮೃತಪಟ್ಟಿದ್ದಾರೆ , ವರ್ಷ ನೆನಪಿಲ್ಲ. ಅಜ್ಜಿ ಕಾಳಮ್ಮರವರು 1995 ರಲ್ಲಿ ಮೃತಪಟ್ಟಿದ್ದಾರೆ. ತಿಪ್ಪಣ್ಣ ಮತ್ತು ಕಾಳಮ್ಮರವರಿಗೆ ರಾಮಣ್ಣ ಮತ್ತು ಪ್ರಹ್ಲಾದ ಎಂಬ ಇಬ್ಬರು ಗಂಡು ಮಕ್ಕಳು ಹಾಗೂ ಜಯಲಕ್ಷ್ಮಿ, ಪದ್ಮಾವತಿ ಎಂಬ ಇಬ್ಬರು ಹೆಣ್ಣು ಮಕ್ಕಳು ಜನಿಸಿದ್ದರು. ಪ್ರಹ್ಲಾದ ನನ್ನ ತಂದೆ, ರಾಮಣ್ಣ ನನ್ನ ದೊಡ್ಡಪ್ಪ. ಸದರಿ ರಾಮಣ್ಣ ಸನ್ 2005 ರಲ್ಲಿ ಮೃತಪಟ್ಟಿದ್ದಾರೆ. ಆತನ ಹೆಂಡತಿ ರೇಣವ್ವ 2025 ರಲ್ಲಿ ಮೃತಪಟ್ಟಿದ್ದಾರೆ. ಸದರಿ

ರಾಮಣ್ಣರವರಿಗೆ ಯಾವುದೇ ಮಕ್ಕಳು ಜನಿಸಿರುವುದಿಲ್ಲ . ಸದರಿಯವರು ಸಂತಾನವಿಲ್ಲದೆ ಮೃತಪಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರಿಗೆ ಮಕ್ಕಳು ಜನಿಸಿರುವ ವಿಚಾರ ಗೊತ್ತಿದ್ದರೂ, ಸುಳ್ಳು ವಿಷಯ ನಮೂದಿಸಿದ್ದೇನೆ ಎಂದರೆ ಸರಿಯಲ್ಲ.

ತಂದೆ ಪ್ರಹ್ಲಾದರವರು ಸನ್ 2017 ರಲ್ಲಿ ಮೃತಪಟ್ಟಿದ್ದಾರೆ. ತಾಯಿ 2025 ರಲ್ಲಿ ಮೃತಪಟ್ಟಿದ್ದಾರೆ. ನಮ್ಮ ತಂದೆಗೆ ನಾವು 3 ಜನ ಗಂಡು ಮಕ್ಕಳು ಹಾಗೂ ಇಬ್ಬರೂ ಹೆಣ್ಣು ಮಕ್ಕಳು. ತಂದೆಗೆ ನಾವು 5 ಜನ ಮಾತ್ರ ಮಕ್ಕಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮನ್ನು ಹೊರತುಪಡಿಸಿ ತಂದೆಗೆ ಬೇರೆ ಮಕ್ಕಳೂ ಸಹ ಜನಿಸಿದ್ದಾರೆ ಎಂದರೆ ಸರಿಯಲ್ಲ. ಸದರಿಯವರನ್ನು ಉದ್ದೇಶಪೂರ್ವಕವಾಗಿ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಜಾನವ್ವ ನನ್ನ ತಂದೆಯ ಸಹೋದರಿ. ಅವರು ಮೃತಪಟ್ಟ ವರ್ಷ ನೆನಪಿಲ್ಲ. ಅಂದಾಜು 10-ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ಅವರ ಗಂಡ ಪಾಂಡುರಂಗ ಅಂದಾಜು 12-ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ಸದರಿಯವರಿಗೆ 6 ರಿಂದ 8 ನೇ ವಾದಿಯರು ಮಾತ್ರ ಮಕ್ಕಳಾಗಿದ್ದಾರೆ. 6 ರಿಂದ 8 ನೇ ವಾದಿಯರು ಮಾತ್ರ ಜಾನವ್ವರವರ ವಾರಸುದಾರರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರ ಎಲ್ಲ ವಾರಸುದಾರರನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. 9 ನೇ ವಾದಿಯು ನನ್ನ ತಂದೆಯ ಕೊನೆಯ ಸಹೋದರಿ. ದೊಡ್ಡಪ್ಪ ರಾಮಣ್ಣರವರಿಗೆ ಮಕ್ಕಳು ಇರುವ ವಿಚಾರವನ್ನು ಮರೆಮಾಚಿ ಸುಳ್ಳು ವಂಶವೃಕ್ಷ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿಯವರಿಗೆ ನಾವು ಮಾತ್ರ ವಾರಸುದಾರರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತನಿಗೆ ನಮ್ಮನ್ನು ಹೊರತು ಪಡಿಸಿ ಬೇರೆ ವಾರಸುದಾರರು ಇದ್ದಾರೆ ಎಂದರೆ ಸರಿಯಲ್ಲ. ಅವರನ್ನು ಉದ್ದೇಶ ಪೂರ್ವಕವಾಗಿ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಮೃತನಿಗೆ ಬೇರೆ ವಾರಸುದಾರರು ಇರುವ ವಿಚಾರ ಗೊತ್ತಿದ್ದರೂ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ರಾಮಣ್ಣರವರ ಹೆಸರಿನಲ್ಲಿ ನರಗುಂದ ಪಟ್ಟಣದಲ್ಲಿ ಒಂದು ಮನೆ ಮತ್ತು ಒಂದು ಖಾಲಿ ಜಾಗೆ ಇವೆ. ಸದರಿ ಆಸ್ತಿಗಳ ದಾಖಲೆಗಳನ್ನು ಹಾಜರು ಪಡಿಸಿರುವುದ್ದೇನೆ. ಮೃತನ ವಾರಸಾ ಪ್ರಮಾಣ ಪತ್ರ ಕೋರಿ 2 ನೇ ಪ್ರತಿವಾದಿಗೆ ಅರ್ಜಿ ಸಲ್ಲಿಸಿದ್ದೇನು ಎಂದು ಹಾಗೂ ಅದಕ್ಕೆ ನಿಪಿ-1

ರಂತೆ ಹಿಂಬರಹ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತನ ಎಲ್ಲ ವಾರಸುದಾರರನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಿಜ ಸಂಗತಿಗಳನ್ನು ಮರೆಮಾಚಿ ಸುಳ್ಳು ಸಂಬಂಧ ಸೃಷ್ಟಿಸಿಕೊಂಡು ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಪ್ರತಿವಾದಿಯವರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ವ.ಕೇ.ಸರಿ ಅದೆ

ದಿವಾಣಿ ನ್ಯಾಯಾದೀಶರು ಹಾಗೂ
ಪ್ರ.ದ.ನ್ಯಾದಂಡಾಧಿಕಾರಿಗಳು, ನರಗುಂದ